**ಕರ್ನಾಟಕ ಸರ್ಕಾರ**

ಸಂಖ್ಯೆ :ಗ್ರಾಅಪ :40:ಸುಗ್ರಾಯೋ:2009

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ 11.05.2010.

**ಸುತ್ತೋಲೆ**

ವಿಷಯ : ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುವ ಬಗ್ಗೆ.

ಸುವರ್ಣ ಗ್ರಾಮೋದಯ ಯೋಜನೆಯ 1ನೇ ಹಂತದಡಿ 2006-07 ಮತ್ತು 2007-08ನೇ ಸಾಲುಗಳಲ್ಲಿ ಒಟ್ಟು 1204 ಗ್ರಾಮಗಳನ್ನು ಆಯ್ಕೆ ಮಾಡಿ ರೂ.1000.00ಕೋಟಿಗಳಲ್ಲಿ ಅನುದಾನದ ಮಿತಿಯೊಳಗೆ 2007-08ನೇ ಸಾಲಿನಿಂದ ಆಯ್ಕೆಯಾದ ಗ್ರಾಮಗಳಲ್ಲಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ದಿ:31.03.2010ರ ಪ್ರಗತಿ ವರದಿಗನುಗುಣವಾಗಿ ಆಯ್ಕೆಯಾದ 1037 ಗ್ರಾಮಗಳ ರಸ್ತೆ/ಚರಂಡಿ ಕಾಮಗಾರಿಗಳು ಪೂರ್ಣಗೊಂಡಿವೆ. ಒಟ್ಟು 2964 ಕಿ.ಮೀ.ರಸ್ತೆ ಅಭಿವೃದ್ಧಿ ಪೈಕಿ 2710 ಕಿ.ಮೀ.ರಸ್ತೆ ಅಭಿವೃದ್ಧಿಪಡಿಸಲಾಗಿದೆ. ಒಟ್ಟು 2898 ಕಿ.ಮೀ.ಚರಂಡಿ ಅಭಿವೃದ್ಧಿ ಪೈಕಿ 2136 ಕಿ.ಮೀ.ಚರಂಡಿ ಅಭಿವೃದ್ಧಿಪಡಿಸಲಾಗಿದೆ. 2478 ಅಂಗನವಾಡಿ/ಸಮುದಾಯ ಭವನ ಕಟ್ಟಡಗಳ ಪೈಕಿ 1581 ಕಟ್ಟಡಗಳನ್ನು ಪೂರ್ಣಗೊಳಿಸಲಾಗಿದೆ. ಎಲ್ಲಾ ಜಿಲ್ಲಾ ಪಂಚಾಯತ್‌ಗಳಲ್ಲಿ ಲಭ್ಯವಿರುವ ಒಟ್ಟು ಅನುದಾನ ರೂ.939.26 ಕೋಟಿಗಳಲ್ಲಿ ರೂ.829.14 ಕೋಟಿ ವೆಚ್ಚ ಮಾಡಲಾಗಿದೆ. ಬಾಕಿ ಉಳಿದ ಕಾಮಗಾರಿಗಳನ್ನು ಅನ್ಯ ಕಾರ್ಯಕ್ರಮಗಳಡಿ ಕೈಗೊಂಡಿರಬಹುದಾಗಿದೆ ಅಥವಾ ನಿವೇಶನ/ಸ್ಥಳ ತಂಟೆ ತಕರಾರು/ಲಭ್ಯವಿರದ ಕಾರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸದೆ ಬಿಟ್ಟಿರಬಹುದಾಗಿದೆ. ಆದುದರಿಂದ 1ನೇ ಹಂತದ ಕಾರ್ಯಕ್ರಮವನ್ನು ಜೂನ್ 30ರೊಳಗೆ ಮುಕ್ತಾಯಗೊಳಿಸಲು ಸೂಚಿಸಿದೆ. 1ನೇ ಹಂತದಡಿ ಆಯ್ಕೆಯಾದ ಗ್ರಾಮಗಳ ವಿವರವಾದ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಸರ್ಕಾರಕ್ಕೆ ಸಲ್ಲಿಸುವುದು.

**(ವಿ.ರವಿಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

1.ಮಾನ್ಯ ಗ್ರಾ.ಅ ಮತ್ತು ಪಂ.ರಾಜ್ ಸಚಿವರುರವರಿಗೆ ಮಾಹಿತಿಗಾಗಿ ಆಪ್ತಶಾಖೆಯ ಮೂಲಕ ಸಲ್ಲಿಸಲಾಗಿದೆ.
2.ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ,
3.ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು.
4.ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.